ಪ್ರಬಂಧ

# ಕನ್ನಡವೆಂದರೆ...




## ಮೀನಾಕ್ಷಿ ಹೆಂಗವಳ್ಳಿ

ಕಲೆ: ಗುಜ್ಜಾರ್


ಒಂದಾನೊಂದು ಕಾಲದಲ್ಲಿ 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್' ಎಂಬ ಭಾವನೆಗೆ ಪಾತ್ರವಾಗಿದ್ದ ನಮ್ಮೀ ಕರುನಾಡ ಕನ್ನಡಮ್ಮನ ಇಂದಿನ ಬಹುರೂಪದ ಬಸಿರೊಳಗಿನ ಕೆಲ ದೇಸಿ ಮುಖಗಳು ಮತ್ತು ಅವುಗಳ ಜೊತೆ ಹೆಣೆದುಕೊಂಡ ಅವಳ ಮಕ್ಕಳ ಬದುಕಿನ ಹಲವು ಗಂಟುಗಳು-ಇವೆರಡೂ ನೇರಾನೇರ ನನ್ನ ಸಂಪರ್ಕಕ್ಕೆ ಬಂದದ್ದು ಇತ್ತೀಚೆಗಿನ ವರ್ಷಗಳಲ್ಲಿ ಅಂದರೆ ಮಹಾಮಾರಿ ಕೊರೋನಾ ಕಾಲದ ಆಸುಪಾಸಿನಲ್ಲಿ! ಹಾಗೆ ನೋಡಿದರೆ ಆರೂವರೆ ದಶಕಗಳಿಗೂ ಹಿಂದಿನ ಆ ನನ್ನ ಬಾಲ್ಯದಲ್ಲಿ ರೇಡಿಯೋ, ಪತ್ರಿಕೆಗಳು ಕೂಡಾ ನಮ್ಮೂರಿಗೆ ಅಪರಿಚಿತವಿದ್ದ ಕಾಲದಲ್ಲಿ ಕನ್ನಡವೆಂದರೆ ಕೇವಲ ಕುಂದಾಪ್ರ ಕನ್ನಡ ಮಾತ್ರ ಅಂದುಕೊಂಡ ನನಗೆ ಜ್ಞಾನೋದಯವಾಗಲು ಶುರುವಾದದ್ದು ಶಾಲೆಯ ಮೆಟ್ಟಿಲು ಹತ್ತಿದ ಮೇಲೇನೆ!

'ನಾಗರ ಹಾವೆ ಹಾವೊಳು ಹೂವೆ ಬಾಗಿಲ ಬಿಲದಲಿ ನಿನ್ನಯ ಠಾವೆ', 'ಬಣ್ಣದ ತಗಡಿನ ತುತ್ತೂರಿ ಕಾಸಿಗೆ ಕೊಂಡನು ಕಸ್ತೂರಿ'- ಹೀಗೆ ಮನೆಯ ಆಡುಮಾತಿಗಿಂತ ಭಿನ್ನವಾದ ಪದಗಳೆಲ್ಲ ನಾಲಿಗೆಯ ಮೇಲೆ ನಲಿದಾಡುತ್ತ ಮೇಲಿನ ಕ್ಲಾಸಿಗೆ ಹೋದ ಹಾಗೆ ಹೊಸ ಹೊಸ ಪಠ್ಯಗಳ ಪುಟ ತೆರೆಯುತ್ತಾ,

'ನರನರವನೆಲ್ಲ ಹುರಿಗೊಳಿಸಿ ಹೊಸೆದು ಹಚ್ಚೇವು ಕನ್ನಡದ ದೀಪ', 'ದುರ್ಮೋಃಹಿ ವಿಶ್ವಾಮಿತ್ರ ಪಾಪಿ ಇನ್ನಾದೊಡಂ ಸತಿಯ ಕೊಲೆಯಂ ನಿಲಿಸಲು ಹೋಹುದೇನೆಂದೋವಿ ಬೇಡಿಕೊಳುತಂ', 'ತೆಂಕಣ ಗಾಳಿ ಸೋಂಕಿದೊಡಂ ಒಳ್ನುಡಿಗೇಳ್ದೊಡಮಿಂಪನಾಳ್ದ ಗೇಯಂ ಕಿವಿವೊಕ್ಕಡಂ' -ಇತ್ಯಾದಿ ಹೊಸಗನ್ನಡ, ನಡುಗನ್ನಡ, ಹಳೆಗನ್ನಡದ ಈ ರೂಪಗಳೆಲ್ಲ- 'ಮಾಸ್ತ್ರ' ದೊಣ್ಣೆಯೇಟಿಗೆ ಹೆದರಿ ನಾಲಗೆ ಉರುಳಿಸಿ ಹೊರಳಿಸಿ ಉರು ಹೊಡೆದು ಪಾಠ ಒಪ್ಪಿಸಿದ್ದು ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕ ಗಳಿಸಲು ನೆರವಾಯಿತೇ ಹೊರತು ಕನ್ನಡಮ್ಮನ ವೈವಿಧ್ಯತೆಯ ಸೊಬಗು ಅಷ್ಟಾಗಿ ತಲೆಗೆ ಹೊಕ್ಕಿರಲಿಲ್ಲ! ನಂತರ 'ದೇಶ' ಸುತ್ತದೇ ಶಾಲಾ ಗ್ರಂಥಾಲಯಗಳಲ್ಲಿ ಸಿಕ್ಕಿದ ಕೆಲ 'ಕೋಶ' ಓದುತ್ತಾ ಭಾಷೆಯ ಕುರಿತಾದ ಅರಿವು ಕೊಂಚ ಹೆಚ್ಚುತ್ತಾ ಹೋದರೂ ಅವಳ ನಾನಾ ರೂಪ ಗಮನಕ್ಕೆ ಬರಲು ಶುರುವಾದದ್ದು ಮದುವೆಯಾದ ಬಳಿಕವೇ! ನನ್ನವರ ಕೆಲಸದ ನಿಮಿತ್ತ ಈ ನಾಡಿನ ಆವೂರು ಈವೂರಿಗೆ ಹೋಗಿ ನೆಲೆಸುವಾಗ ಮಲ್ನಾಡು, ಕರಾವಳಿ, ಬಯಲುಸೀಮೆ,